ಶ್ರೀ ವಾಟಾಳ್‌ನಾಗರಾಜ್ : ಮಂತ್ರಿಗಳ ಬಗ್ಗೆ ನಾನು ಹೇಳಲಿಲ್ಲ. ಅಧಿಕಾರಿಗಳು ಇಲ್ಲಿ ಇಲ್ಲ, ಕುರ್ಚಿಗಳೆಲ್ಲ ಖಾಲಿ ಇದ್ದದ್ದರಿಂದ ಅವರು ಎಲ್ಲಿದ್ದಾರೆ, ರೇಸ್‌ಕೋರ್ಸಿಗೆ ಹೋಗಿದ್ದಾರಾ ಅವರನ್ನು ಎಲ್ಲಿದ್ದಾರೆ ಹುಡುಕೋಣವೆಂದು ಹೇಳಿದ್ದೇನೆ. ಬೇಕಾದರೆ ರೆಕಾರ್ಡ್ ತೆಗೆಸಿ ನೋಡಿ ನಾನು ಆ ರೀತಿ ಹೇಳಿಲ್ಲ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಉಪಾಧ್ಯಕ್ಷೀಣೀಯವರೆ, ಯಾವುದೇ ನೋಟೀಸ್ ಇಲ್ಲದೆ ಇದ್ದಕ್ಕಿದ್ದ ಹಾಗೆ ವಿಷಯವನ್ನು ತೆಗೆದರೆ ಮಂತ್ರಿಗಳು ಹೇಗೆ ಉತ್ತರವನ್ನು ಹೇಳಬೇಕು. ಮಂತ್ರಿಗಳು ಆ ಸದನದಲ್ಲಿ ಇರಬೇಕಾಗುತ್ತದೆ. ಆಗ ಇಲ್ಲಿ ಉತ್ತರಕೊಡುವುದಕ್ಕಾಗುವುದಿಲ್ಲ. ಈಗಾಗಲೇ ಈ ವಿಚಾರದಲ್ಲಿ ಚರ್ಚೆ ನಡೆದಿದೆ. ಏನಾದರೂ ಇದ್ದರೆ ನನ್ನ ಗಮನಕ್ಕೆ ತಂದರೆ ಅಥವಾ ಅವರು ಸಲಹೆ ಕೊಟ್ಟರೆ ಏನಾದರೂ ಮಾಡಬಹುದು. ಬೆಂಗಳೂರುನಗರದ ವಿಚಾರದಲ್ಲಿ, ರಾಜ್ಯದ ಬೇರೆ ನಗರಗಳ ವಿಚಾರದಲ್ಲಿ ಆದಷ್ಟು ತೀವ್ರ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ ಇನ್ನೇನಾದರೂ ಕ್ರಮ ತೆಗೆದುಕೊಳ್ಳಬೇಕಾದರೆ ತಾವು ಸಲಹೆಗಳನ್ನು ಕೊಡಿ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ರೈತರ ಪಂಪ್‌ಸೆಟ್ಟುಗಳ ವಿಷಯದಲ್ಲಿ ಸರ್ಕಾರದದ ಗಮನವನ್ನು ಸೆಳೆಯಲಾಗಿತ್ತು. ಸರ್ಕಾರ ಕೊಡಲಿಲ್ಲ.

ಉಪಾಧ್ಯಕ್ಷರು : ನೀವು ಬೇರೆ ರೂಪದಲ್ಲಿ ನೋಟಿಸ್ ಕಳುಹಿಸಿ, ನಾಳೆ ದಿವಸ ಅದನ್ನು ತೆಗೆದುಕೊಳ್ಳೋಣ.

ಗಮನ ಸೆಳೆಯುವ ಸೂಚನೆಗಳು

ತಿಪಟೂರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಕೊಬ್ಬರಿ ಹರಾಜು ಧಾರಣೆಯಲ್ಲಿ ಆಗುತ್ತಿರುವ ವ್ಯತ್ಯಾಸ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷರೇ. ತಿಪಟೂರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಕೊಬ್ಬರಿ ಹರಾಜು ಧಾರಣೆಯಲ್ಲಿ ಆಗುತ್ತಿರುವ ವ್ಯತ್ಯಾಸದ ಬಗ್ಗೆ ಮಾನ್ಯ ಸಹಕಾರ ಮಂತ್ರಿಯವರ ಗಮನ ಸೆಳೆಯುತ್ತೇನೆ.

+ ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಮಂತ್ರಿ) : ಮಾನ್ಯ ಉಪಾಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ತಿಪಟೂರು ಮಾರುಕಟ್ಟೆಯಲ್ಲಿ ಧಾರಣೆಯು ಕೊಬ್ಬರಿಯ ಗಾತ್ರದ ಮೇಲೆ ಅವಲಂಬಿಸಿರುತ್ತದೆ. ಮಾರುಕಟ್ಟೆ ಪ್ರಾಂಗಣಕ್ಕೆ ಅವಕವಾಗುವ ಸಣ್ಣ ಮಧ್ಯಮ ಹಾಗೂ ದಪ್ಪ ಗಾತ್ರದ ಕೊಬ್ಬರಿಗೆ ಬೇರೆ ಬೇರೆ ರಾಜ್ಯಗಳ ವರ್ತಕರಿಂದ ಬೇಡಿಕೆ ಇರುತ್ತದೆ. ಸಣ್ಣ ಗಾತ್ರದ ಕೊಬ್ಬರಿಯನ್ನು ಪಂಜಾಬ್,ಹರಿಯಾಣ,ರಾಜ್ಯಗಳಲ್ಲಿ ಮಧ್ಯಮ ಗಾತ್ರದ ಕೊಬ್ಬರಿಯು ಉತ್ತರ ಪ್ರದೇಶ, ಬಿಹಾರ್ ಮತ್ತು ಗುಜರಾತ್ ರಾಜ್ಯ ಹಾಗೂ ದಪ್ಪ ಗಾತ್ರದ ಕೊಬ್ಬರಿಯು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಬೇಡಿಕೆ ಇದ್ದು ಸದರಿ ರಾಜ್ಯಗಳ ವರ್ತಕರಿಂದ ಬರುವ ಬೇಡಿಕೆ ಮತ್ತು ಅವಶ್ಯಕತೆಯನ್ನು ಅನುಸರಿಸಿ ಸ್ಥಳೀಯ ವರ್ತಕರು ಖರೀದಿ ಮಾಡುವರು. ಇದಲ್ಲದೆ ಮಾರುಕಟ್ಟೆ ಧಾರಣೆ ಪ್ರವೃತ್ತಿಯು ಪೂರೈಕೆ ಮತ್ತು ಬೇಡಿಕೆಯನ್ನು ಅವಲಂಬಿಸಿರುವುದರಿಂದ ತಿಪಟೂರು ಮಾರುಕಟ್ಟೆಯಲ್ಲಿ ಕೊಬ್ಬರಿ ಧಾರಣೆಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾಗುವ ಸಾಧ್ಯತೆಯಿರುತ್ತದೆ.

1990ರ ಜುಲೈ ತಿಂಗಳಿಂದ 1991ರ ಫೆಬ್ರುವರಿವರೆವಿಗೆ ಕೊಬ್ಬರಿ ಕ್ವಿಂಟಾಲ್ ಒಂದಕ್ಕೆ ಬಂದಿರುವ ಮಾದರಿ ಧಾರಣೆಯನ್ನು ಈ ಕೆಳಗೆ ಕಾಣಿಸಿದಂತೆ ಪರಿಶೀಲಿಸಿದಾಗ ಸದರಿ ಅವಧಿಯಲ್ಲಿ ಧಾರಣೆಯು ಏರುತ್ತಿರುವುದು ಕಂಡು ಬರುತ್ತದೆ.

ಜುಲೈ 1990...	ರೂ.	1700-00
ಆಗಸ್ಟ್ 1990 ...	ರೂ.	1750-00
ಸೆಪ್ಟಂಬರ್ 1990 ..	ರೂ.	1850-00
ಅಕ್ಟೋಬರ್ 1990...	ರೂ.	1900-00
ನವೆಂಬರ್ 1990 ..	ರೂ.	2350-00
ಡಿಸೆಂಬರ್ 1990..	ರೂ.	2400-00
ಜನವರಿ 1991 ...	ರೂ,	2750-00
ಫೆಬ್ರವರಿ 1991....	ರೂ.	2700-00

ಈ ಮೊದಲು ಮಾರುಕಟ್ಟೆ ಪ್ರಾಂಗಣಕ್ಕೆ ಏಳು ದ್ವಾರಗಳಿದ್ದವು. ಅವುಗಳ ಮೂಲಕ ಕೊಬ್ಬರಿಯು ಅನಧಿಕೃತವಾಗಿ ತರಲು ಮತ್ತು ತೆಗೆದುಕೊಂಡು ಹೋಗಲು ಅವಕಾಶವಿತ್ತು. ಮಾರುಕಟ್ಟೆ ಪ್ರಾಂಗಣಕ್ಕೆ ಬರುವ ಕೊಬ್ಬರಿಯ ಲೆಕ್ಕವನ್ನು ಇಡಲು ಮಾರುಕಟ್ಟೆ ಸಮಿತಿಗೆ ಅವಕಾಶವಾಗುತ್ತಿರಲಿಲ್ಲ. ದಲ್ಲಾಲರ ಅಂಗಡಿಗೆ ಬಂದ ಎಲ್ಲಾ ಮಾಲನ್ನು ಟೆಂಡರ್‌ಗೆ ಇಡದೇ ಅವಕವಾದ ಶೇಕಡಾ 10ರಷ್ಟನ್ನು ಮಾತ್ರ ಟೆಂಡರ್‌ಗೆ ಇಡಲಾಗುತ್ತಿತ್ತು. ಹಾಗೂ ವಾರದಲ್ಲಿ ಎರಡು ದಿನ ಮಾತ್ರ ಟೆಂಡರ್ ನಡೆಸಲಾಗುತ್ತಿತ್ತು. ಇದರಿಂದ ರೈತರಿಗೆ ಕಡಿಮೆ ಧಾರಣೆ ನೀಡಿ, ಉಳಿದ ಕೊಬ್ಬರಿಯ ಅನಧಿಕೃತ ವ್ಯವಹಾರ ನಡೆಸಲು ಅವಕಾಶವಿತ್ತು. ಈ ಮೇಲಿನ ಲೋಪದೋಶಗಳ ಬಗ್ಗೆ ಸಾಕಷ್ಟು ದೂರುಗಳು ಬಂದಿದ್ದರಿಂದ ಇಲಾಖೆಯು ವಿಶೇಷ ಕ್ರಮ ಕೈಗೊಂಡು ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಮಾರುಕಟ್ಟೆ ಸಮಿತಿಯ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 22-9-1990ರಂದು ರೈತರ ಹಾಗೂ ವರ್ತಕರ ಸಭೆ ನಡೆಸಿ, ಲೋಪದೋಷಗಳ ಬಗ್ಗೆ ಪರಸ್ಪರ ಚರ್ಚಿಸಿ, ಈ ಲೋಪದೋಷಗಳನ್ನು ನಿವಾರಿಸಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ದಿನಾಂಕ : 22-9-1990ರಿಂದ ಎರಡು ದ್ವಾರಗಳನ್ನು ಮಾತ್ರ ತೆರೆಯಲಾಗಿದೆ. ಕೊಬ್ಬರಿಯ ಮಾರಾಟಕ್ಕಾಗಿ ಅವಕವಾದ ಕೂಡಲೇ ಗೇಟಿನಲ್ಲಿ ಪ್ರವೇಶ ಪತ್ರ ನೀಡಿ ರೈತರ ಹೆಸರು ಮಾಲಿನ ಪ್ರಮಾಣ, ಯಾವ ದಲ್ಲಾಲರ ಅಂಗಡಿಗೆ ಹೋಗುತ್ತದೆ ಅವರ ಹೆಸರು ಮೊದಲಾದ ಮಾಹಿತಿಯನ್ನು ದಾಖಲು ಮಾಡಿ ಕೊಳ್ಳಲಾಗುವುದು.

2) ಗೇಟಿನಲ್ಲಿ ಕೊಡುವ ಪ್ರವೇಶ ಪತ್ರದಲ್ಲಿ ನಮೂದಿಸಿದ ಪ್ರಮಾಣಕ್ಕೆ ಅನುಗುಣವಾಗಿ ದಲ್ಲಾಲರ ಅಂಗಡಿಯಲ್ಲಿ ಕೂಡಲೇ ತೂಕ ಮಾಡಿಸಲಾಗುವುದು. ಮತ್ತು ಸ್ಟಾಕ್ ಪುಸ್ತಕದಲ್ಲಿ ಅವಕ ಮತ್ತು ಮಾರಾಟ ವಿವರಗಳನ್ನು ದಾಖಲು ಮಾಡಲು ಕಡ್ಡಾಯಪಡಿಸಲಾಗಿದೆ.

3) ವಾರಕ್ಕೆ ಎರಡು ದಿನ ಮಾತ್ರ ಟೆಂಡರ್ ಮಾರಾಟವಾಗುತ್ತಿದ್ದ ಪದ್ಧತಿಯನ್ನು ನಿಲ್ಲಿಸಿ ಪ್ರತಿ ದಿನ ದಲ್ಲಾಲರ ಅಂಗಡಿಗೆ ಮಧ್ಯಾಹ್ನ 1.30 ಗಂಟೆಯವರೆಗೆ ಬರುವ ಎಲ್ಲಾ ಕೊಬ್ಬರಿಯನ್ನು ಅದೇ ದಿನ ಟೆಂಡರ್‌ಗೆ ಇಡಲು ವ್ಯವಸ್ಥೆ ಮಾಡಲಾಗಿದೆ. ಮಧ್ಯಾಹ್ನ 1.30 ಗಂಟೆಯ ನಂತರ ಬರುವ ಅವಕವನ್ನು ಮರುದಿನ ಟೆಂಡರ್‌ಗೆ ಇಡಲಾಗುವುದು.

ಮೇಲಿನ ಕ್ರಮಗಳನ್ನು ಕೈಗೊಂಡ ಪ್ರಯುಕ್ತ ಮಾರಾಟ ಪದ್ಧತಿಯಲ್ಲಿ ಸಾಕಷ್ಟು ಸುಧಾರಣೆಯಾಗಿದೆ. 1990ನೇ ಸಾಲಿನ ಜುಲೈ ತಿಂಗಳಿನಿಂದ 1991ನೇ ಫೆಬ್ರವರಿವರೆಗೆ ಆವಕವು ಒಟ್ಟು 2.15 ಲಕ್ಷ ಕ್ವಿಂಟಾಲ್‌ಗಳಾಗಿದೆ. ಕಳೆದ ಸಾಲಿನ ಇದೇ ಅವಧಿಯಲ್ಲಿ ಆಂದರೆ, 1989ನೇ ಜುಲೈನಿಂದ 1990ನೇ ಫೆಬ್ರವರಿವರೆಗೆ 1.39 ಲಕ್ಷ ಕ್ವಿಂಟಾಲ್‌ಗಳಷ್ಟು

ಮಾತ್ರ ಅವಕವಾಗಿತ್ತು. ಕಳೆದ ವರ್ಷಕ್ಕೆ ಹೋಲಿಸಿದಾಗ ಈ ವರ್ಷ ಇದೇ ಅವಧಿಯಲ್ಲಿ 86,110 ಕ್ವಿಂಟಾಲ್ ಹೆಚ್ಚುವರಿ ಕೊಬ್ಬರಿ ಅವಕವಾಗಿರುತ್ತದೆ.

ಕಳೆದ 3 ವರ್ಷಗಳಲ್ಲಿ ಮಾರುಕಟ್ಟೆಗೆ ಅವಕವಾಗಿರುವ ಕೊಬ್ಬರಿಯ ವಿವರಗಳು ಈ ಕೆಳಗಿನಂತಿವೆ.

1) 1988-89 (ಜುಲೈ 1988ರಿಂದ ಫೆಬ್ರವರಿ 1989ರವರೆಗೆ) - 78,941 ಕ್ವಿಂಟಾಲ್

2) 1989-90 (ಜುಲೈ 1989 ರಿಂದ ಫೆಬ್ರವರಿ 1990ರವರೆಗೆ) - 1,39,041 ಕ್ವಿಂಟಾಲ್

3) 1990-91 (ಜುಲೈ 1990ರಿಂದ ಫೆಬ್ರವರಿ 1991ರ ವರೆಗೆ) - 2,15,156 ಕ್ವಿಂಟಾಲ್

ಈ ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ತಿಪಟೂರು ಮಾರುಕಟ್ಟೆಯಲ್ಲಿ ಕೊಬ್ಬರಿ ಮಾರಾಟವು ಲೆಕ್ಕಕ್ಕೆ ಬಾರದೆ ಹೋಗುತ್ತಿದೆ ಎಂಬುದು ಸೂಕ್ತವೆನಿಸುವುದಿಲ್ಲ. ಆದರೂ ಇನ್ನಷ್ಟು ಹೆಚ್ಚು ಹಿಡಿತವು ಅವಶ್ಯವೆಂದೆನಿಸಿದ್ದು ಈಗಾಗಲೆ ಅಧಿಕಾರಿಗಳಿಗೆ ಸೂಕ್ತ ಸಲಹೆ ನೀಡಲಾಗಿದೆ.

+ ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷರೇ, ಇಡೀ ರಾಜ್ಯದಲ್ಲಿ ಬಹುತೇಕ ಬೆಳೆಯತಕ್ಕ ಕೊಬ್ಬರಿಯನ್ನು ತಿಪಟೂರು ಮಾರ್ಕೆಟ್ ಮೂಲಕ ನಮ್ಮ ರೈತರು ಮಾರಾಟ ಮಾಡುತ್ತಾರೆ. ಈ ಮಾನ್ಯಮಂತ್ರಿಗಳು ಉತ್ತರದಲ್ಲಿ ನೀವೆಲ್ಲ ವಿಧಾನಸೌಧದಲ್ಲಿ ಚರ್ಚೆ ಮಾಡಿದಮೇಲೆ ತಿಪಟೂರು ಎ.ಪಿ.ಎಂ.ಸಿಯ ಯಾರ್ಡ್‌ನಲ್ಲಿ ಎರಡೇ ಎರಡು ದ್ವಾರಗಳನ್ನು ತೆಗೆದು ಅದರ ಮೂಲಕವೇ ಸರಿಯಾಗಿ ಬರತಕ್ಕಂಥ ಕೊಬ್ಬರಿಗೆ ಧಾರಣೆ ನಿಗದಿಮಾಡಿ, ಕ್ರಮಬದ್ಧವಾಗಿ ಮಾಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ನಿಜಕ್ಕೂ ಸಹಿತ ಎ.ಪಿ.ಎಂ.ಸಿ. ಯಾರ್ಡ್‌ನ ಅಧಿಕಾರಿಗಳೇ ಈ ಖರೀದಿಗಾರರ ಜೊತೆಗೆ ಶಾಮೀಲಾಗಿ ಇವತ್ತು ರೈತರನ್ನು ಸಂಪೂರ್ಣವಾಗಿ ದರೋಡೆ ಮಾಡುತ್ತಿದ್ದಾರೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ನಾನು ಅಂಕಿಅಂಶಗಳನ್ನು ಇಲ್ಲಿ ತಂದಿದ್ದೇನೆ. ತಮ್ಮ ಹೇಳಿಕೆಯಲ್ಲಿ 1988-89ರಲ್ಲಿ 78,941 ಕ್ವಿಂಟಾಲ್ ಬಂದಿದೆ ಎಂದು ಹೇಳಿದ್ದೀರಿ.

1989-90ರಲ್ಲಿ 1 ಲಕ್ಷದ 39ಸಾವಿರ ಕ್ವಿಂಟಾಲ್ ಬಂದಿದೆ ಎಂದು ಹೇಳಿದ್ದೀರಿ, 1990-91ರಲ್ಲಿ 2ಲಕ್ಷದ 15 ಸಾವಿರ ಕ್ವಿಂಟಾಲ್ ಬಂದಿದೆ ಎಂದು ಹೇಳಿದ್ದೀರಿ. ಎ.ಪಿ.ಎಂ.ಸಿ. ಅಧಿಕಾರಿಗಳು ಕೊಟ್ಟಿರತಕ್ಕ ಅಂಕಿಅಂಶಗಳ ಪ್ರಕಾರವೇ, ಒಂದು ಅಂಗಡಿಗೆ ಒಂದು ನೂರು ಚೀಲ ಹೋದರೆ, ಅವರು ಸರ್ಕಾರದ ಲೆಕ್ಕಕ್ಕೆ ಕೊಡುವುದು ಬರೀ 5ಚೀಲ. ಇನ್ನು ಉಳಿದುದು ಎಲ್ಲವೂ ಸಹಿತ ಸೆಕೆಂಡ್ಸ್ ಮೂಲಕ ಕ್ಯಾಲಿಕಟ್ ಸೀಲ್ ಹಾಕಿ, ಹೈದರಾಬಾದ್ ಸೀಲ್ ಹಾಕಿ, ಇವತ್ತು ಅಲ್ಲಿಂದ ವಿತರಣೆಯಾಗುತ್ತಿದೆ. ಇದನ್ನು ಸಂಪೂರ್ಣವಾಗಿ ತಡೆಗಟ್ಟಬೇಕೆಂದು ಹೇಳುತ್ತೇನೆ. ಅಲ್ಲಿ ಮೇಲ್ವಿಚಾರಕರು ಇಲ್ಲದೇ ನಡೆಯುತ್ತಾ ಇದ್ದ ದಿನಗಳನ್ನು ನಾವು ನೋಡಿದ್ದೇವೆ. ನಾವು ಈ ಬಗ್ಗೆ 2-3 ಸಾರಿ ಗಲಾಟೆ ಮಾಡಿದ ಮೇಲೆ ಸ್ವಲ್ಪಮಟ್ಟಿಗೆ ಅಂದರೆ ನೂರಕ್ಕೆ ಎರಡು ಭಾಗ ಏನಾದರೂ ಸ್ವಲ್ಪ ಇಂಪ್ರೂವ್ ಆಗಿದೆಯೇ ವಿನಹ, ನೂರಕ್ಕೆ 98 ಭಾಗ ಇವತ್ತಿಗೂ ಸಹಿತ ತಿಪಟೂರು ಮಾರ್ಕೆಟಿನಲ್ಲಿ ಲೋಪದೋಷ ನಡೆಯುತ್ತಿದೆ. ಇಡೀ ರೈತರು ಬೆಳೆದಿರತಕ್ಕ ಬೆಳೆಗೆ, ತಿಪಟೂರಿನಲ್ಲಿ ಎ.ಪಿ.ಎಂ.ಸಿ.ಯವರು ಕೊಟ್ಟಿರತಕ್ಕ ರೇಟಿನ ಪ್ರಕಾರ, ಒಂದು ಅಂಗಡಿಯಲ್ಲಿ 2,800 ರೂಪಾಯಿ ಕ್ವಿಂಟಾಲ್‌ಗೆ ಇದ್ದರೆ, ಮತ್ತೊಂದು ಅಂಗಡಿಯಲ್ಲಿ ಮೂರುವರೆ ಸಾವಿರ ರೂಪಾಯಿ ಕ್ವಿಂಟಾಲ್‌ಗೆ ಆಗುತ್ತದೆ. ಇದು ಏಕೆ ಆಗುತ್ತದೆ ಎನ್ನುವುದನ್ನು ತಾವು ಪರಿಶೀಲನೆ ಮಾಡಿದ್ದೀರಾ? ಕೊಬ್ಬರಿಯಲ್ಲಿ ಬೇರೆ ಏನೂ ಬರುವುದಿಲ್ಲ. ಕೊಬ್ಬರಿಯಲ್ಲಿ ಬರುವುದು ಎರಡು ವಿಧ. ಒಂದು

ಕೊಬ್ಬರಿ, ಇನ್ನೊಂದು ಕೌಟ್ ಎಂದು ಎರಡು ಬರುತ್ತದೆ. ಈ ಎರಡು ವಿಧದಲ್ಲಿ ಕ್ವಿಂಟಾಲ್‌ಗೆ, ಎಂಟುನೂರು ಒಂದು. ಸಾವಿರ ರೂಪಾಯಿ ವ್ಯತ್ಯಾಸ ಬರುತ್ತಿದೆ. ಮನಸ್ಸಿಗೆ ಬಂದಹಾಗೆ ಹರಾಜು ಕೂಗುತ್ತಾರೆ. ಇದರ ಬಗ್ಗೆ ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಹೆಚ್. ವಿಶ್ವಾಂತಯ್ಯ : ಸನ್ಮಾನ್ಯ ಅಧ್ಯಕ್ಷಣೆಯವರೇ, ಮಾನ್ಯ ಮಂತ್ರಿಗಳು ಹೇಳಿರತಕ್ಕ ಹೇಳಿಕೆಯಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಮತ್ತೊಂದು ಮುಖ್ಯವಾದ ವಿಚಾರದ ಬಗ್ಗೆ ಪ್ರಸ್ತಾಪ ಇಲ್ಲ. ರೈತರಿಗೆ ಏನು ಧಾರಣೆ ಕೊಡುತ್ತೀರಿ, ಅಲ್ಲಿ ಅಕ್ರಮವಾಗಿ, ಅಲ್ಲಿರತಕ್ಕ ಅಧಿಕಾರಿಗಳು ಖರೀದಿದಾರರ ಜೊತೆ ಶಾಮೀಲಾಗಿ, ಉತ್ತಮವಾದ ಧಾರಣೆಯನ್ನು ಕೊಡುವುದಕ್ಕೆ ವಿಫಲರಾಗಿದ್ದಾರೆ. ಆದ್ದರಿಂದ ತಾವು ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ ಮುಖಾಂತರ ಅಥವಾ ಬೇರೆ ಯಾವುದಾದರೂ ವ್ಯವಸ್ಥೆಯಿಂದ ರೈತರಿಗೆ ಒಳ್ಳೆಯ ಬೆಲೆಯನ್ನು ಕೊಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೀರಾ? ಮತ್ತೊಂದು ವಿಷಯವನ್ನು ಏನು ಹೇಳಿದ್ದಾರೆ, ಅದನ್ನು ನಾನು ಒಪ್ಪುತ್ತೇನೆ. 1988-89ರಲ್ಲಿ ಏನು ಮಾರ್ಕೆಟಿನಲ್ಲಿ ಮಾರಾಟವಾಯಿತು, ಈಗ ಅದರ ಮೂರರಷ್ಟು ಆಗಿದೆ ಎಂಬ ಮಾತನ್ನು ಒಪ್ಪುತ್ತೇನೆ. ನಾನು ಬೇರೆ ವಿಚಾರ ಬಂದಾಗ ಹೇಳುತ್ತೇನೆ. ಚಿತ್ರದುರ್ಗ ಜಿಲ್ಲೆಯ ಮಾರ್ಕೆಟ್‌ನಲ್ಲಿ ಏನು ಮಾಡುತ್ತಿದ್ದಾರೋ,ಅದನ್ನೇ ತಿಪಟೂರಿನಲ್ಲಿಯೂ ಮಾಡುತ್ತಿದ್ದಾರೆ ಮತ್ತು ಬೇರೆ ಕಡೆಗಳಲ್ಲಿಯೂ ಮಾಡುತ್ತಿದ್ದಾರೆಂದು ನಾನು ಭಾವಿಸಿದ್ದೇನೆ. ರೈತರ ಮಾಲು ಏನು ಬರುತ್ತದೆ. ಆ ಮಾಲನ್ನು ಪೂರ್ಣ ಪ್ರಮಾಣದಲ್ಲಿ ಬರೆಯುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು, ಖರೀದಿದಾರರ ಜೊತೆ ಶಾಮೀಲಾಗಿ, ಒಂದು ಚೀಲ ಎಂದು ಬರೆಯುತ್ತಾರೆ. ಒಂದು ಅಂಡಿಗೆ, ಎರಡು ಅಂಡಿಗೆ ಎಂದು ಬರೆಯುತ್ತಾರೆ. ಯಾವುದೇ ಅಂಗಡಿ ಪುಸ್ತಕದಲ್ಲಿ ನೋಡಿ ಎರಡು ಅಂಡಿಗೆ ಮೇಲೆ, ಹತ್ತಿ ಇಡುವುದಿಲ್ಲ. ಒಂದು ಅಥವಾ ಎರಡು ಚೀಲದ ಮೇಲೆ ಸೂರ್ಯಕಾಂತಿ ಇಡುವುದಿಲ್ಲ. ಅದೇರೀತಿ ಕೊಬ್ಬರಿ ಸಹ 2,5,20 ಚೀಲ ಎಂದು ಬರೆದಿರಿತ್ತಾರೆ. ಹೀಗೆ ನೂರಾರು ಚೀಲ ಕೊಬ್ಬರಿ ಬಂದಾಗಲೂ ಸಹ, ಕಡಿಮೆ ಪ್ರಮಾಣವನ್ನು ನಮೂದು ಮಾಡಿ, ಟ್ಯಾಕ್ಸ್ ಕದಿಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಈ ರೀತಿ ಟ್ಯಾಕ್ಸ್‌ನ್ನು ಕದಿಯುತ್ತಿರುವುದರಿಂದ, ಅಂದರೆ, ಒಂದು ರೂಪಾಯಿ ಟ್ಯಾಕ್ಸ್ ಕದ್ದರೆ, ಅದರ 4ರಿಂದ 8ರಷ್ಟು ತೆರಿಗೆಯನ್ನು ಮಾರಾಟಕ್ಕಾಗಿ ಮತ್ತು ಉಳಿದ ತೆರಿಗೆಗಳು ನಮ್ಮ ರಾಜ್ಯದ ಬೊಕ್ಕಸಕ್ಕೆ ಇವತ್ತಿನ ದಿವಸ ನಷ್ಟವಾಗುತ್ತಿದೆ. ಈ ದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ತಾವು ತೀವ್ರವಾದಂಥ ಸೂಚನೆ ಕೊಡಬೇಕು. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈಗಾಗಲೇ ಅನೇಕ ಸಂದರ್ಭಗಳಲ್ಲಿ ಸಂಬಂಧಪಟ್ಟವರ ಗಮನಕ್ಕೆ ತಂದರೂ ಸಹ ಇದರ ಬಗ್ಗೆ ವಿಚಾರಣೆ ಮಾಡುವಂಥ ಗೋಜಿಗೆ ಹೋಗಿರುವುದಿಲ್ಲ. ಇದರ ಬಗ್ಗೆ ವಿಚಾರಣೆ ಮಾಡಬೇಕು. ಇವತ್ತು ಆಡಳಿತಾಧಿಕಾರಿಗಳು ಇದ್ದಾರೆ. ಚುನಾವಣೆಯಿಂದ, ಚುನಾಯಿತರಾಗಿಬಂದಂಥ ಜನತೆಯ ಪ್ರತಿನಿಧಿಗಳು ಇನ್ನೂ ಅಧಿಕಾರಕ್ಕೆ ಬಂದಿಲ್ಲ. ಈ ಆಡಳಿತ ಮಾಡುವಂಥ ಅಧಿಕಾರಿಗಳು ಸಂಬಂಧಪಟ್ಟವರೊಡನೆ ಶಾಮಿಲಾಗುವುದು ಜಾಸ್ತಿಯಾಗುತ್ತಿದೆ. ಇದರ ಬಗ್ಗೆ ಸರ್ಕಾರ ತೀವ್ರವಾದ ಕ್ರಮ ಕೈಗೊಳ್ಳುತ್ತದೆಯೇ ಎಂಬುದನ್ನು ತಿಳಿಯಬಯಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಸನ್ಮಾನ್ಯ ಸದಸ್ಯರು ಸೂಕ್ತವಾದ ಸಲಹೆಯನ್ನು ಮಾಡಿದ್ದಾರೆ. ಎಲ್ಲಿಯವರೆಗೆ ನಮ್ಮ ಮಾರ್ಕೆಟಿನಲ್ಲಿ ರೈತನು ಬೆಳೆದ ಮಾಲಿಗೆ ಖರೀದಿ ಮಾಡುವಂಥ ವ್ಯವಹಾರವನ್ನು ಸಹಕಾರ ಸಂಘಗಳ ಮೂಲಕ ಮಾಡುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿಯವರೆಗೆ ಮಾರ್ಕೆಟ್ಟಿಗೆ ಗುಲಾಮರಾಗುತ್ತೇವೆ. ಬಾಯರ್ಸ್ ಮಾರ್ಕೆಟ್‌ಗೆ ಗುಲಾಮರಾಗುವುದರಿಂದ, ಒಂದು ದಿನ ಧಾರಣೆ ಏರುತ್ತದೆ, ಒಂದು ದಿನ ಧಾರಣೆ ಕಡಿಮೆಯಾಗುತ್ತದೆ. ಇದನ್ನು ಏಕೆ ಮಾಡುವುದಿಲ್ಲ ಎಂದು ಕೇಳಬಹುದು. ತಾವು

ನಿನ್ನೆ ಮೊನ್ನೆಯಿಂದ ಲೇಖಾನುದಾನ ಬಜೆಟ್ ಕೊಡುವವರಿದ್ದೀರಿ, ಸಹಕಾರಿ ಖಾತೆಗೆ ಪೂಜಿ ಇಟ್ಟೀದ್ದೀರಿ. ಅಂದಮೇಲೆ ಆದರ ಮೇಲೆ ವ್ಯವಸ್ಥೆ ಮಾಡಿ ಎಂದು ಹೇಳಿದರೆ ಹೇಗೆ ಮಾಡುವುದು. ಇವತ್ತು ನಾನಾಗಲೀ, ನೀವಾಗಲೀ. ಇವತ್ತು ನಾನು ಇಲ್ಲಿದ್ದೇನೆ,ನಾಳೆ ನೀವೇ ಇಲ್ಲಿಗೆ ಬರಬಹುದು. ಆದರೆ ಮಾಡತಕ್ಕ ವ್ಯವಸ್ಥೆಯನ್ನು ವಿಚಾರ ಮಾಡೋಣ ಎಂದು ಹೇಳುತ್ತೇನೆ. ಸಹಕಾರ ಸಂಘದೊಳಗೆ ಎಲ್ಲಿಯವರೆಗೆ ಖರೀದಿ ಮಾಡುವ ವ್ಯವಹಾರದ ಸಹಕಾರ ಸಂಘಗಳು ಇರುವುದಿಲ್ಲವೋ, ಎಲ್ಲಿಯವರೆಗೆ ಪ್ರೊಸೆಸಿಂಗ್ ಸೆಂಟರ್ಸ್ ಇರುವುದಿಲ್ಲವೋ, ಅಲ್ಲಿಯತನಕ ರೈತರು ಬಾಯರ್ಸ್ ಮಾರ್ಕೆಟ್ಟಿನ ಗುಲಾಮರಾಗುವುದು ನಿಶ್ಚಿತ.

ನಾವು ಎಷ್ಟೇ ರೀತಿ ಕಟುವಾಗಿ ನಿರ್ದಾಕ್ಷಿಣ್ಯದಿಂದ ವ್ಯವಹಾರ ಮಾಡಿದರೂ ಸಹಿತ ಆಗುತ್ತದೆ, ಆದರೂ ಧೈರ್ಯಗುಂದಬೇಕಾಗಿಲ್ಲ, ಮುಂದುವರಿಯೋಣ.

ಪ್ರೊ ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಸಹಕಾರ ಸಚಿವರು ಒಂದು ನಿಮಿಷ ಅವಕಾಶ ಕೊಡಬೇಕು. ತಾವು ಹೇಳಿದ ವಿಚಾರ ಪೂರ್ತಿ ಒಪ್ಪುತ್ತೇನೆ. ಎಲ್ಲಿಯವರೆಗೆ ಸಹಕಾರ ಸಂಘಗಳಿಗೆ ಖರೀದಿ ಮಾಡುವಂತಹ ವ್ಯವಸ್ಥೆ ಬರುವುದಿಲ್ಲವೋ, ಎಲ್ಲಿಯವರೆಗೆ ಪ್ರೊಸೆಸಿಂಗ್ ಸೆಂಟರ್ ಹಾಕುವ ಶಕ್ತಿ ಬರುವುದಿಲ್ಲವೋ ಅಲ್ಲಿಯವರೆಗೆ ಬೈಯರ್ಸ್ ಮಾರ್ಕೆಟ್‌ನಲ್ಲಿ ತೊಂದರೆಯಾಗುತ್ತದೆ. ತಾವು ಒಂದೇ ಒಂದು ಬೆಲೆ ಕಾನೂನು ಮಾಡಿದರೆ ಈ ದಳ್ಳಾಳಿಗಳು ಏನು ಮೋಸ ಮಾಡುತ್ತಿದ್ದಾರೆ ಅದನ್ನು ನಿಲ್ಲಿಸಬಹುದು.

ಉಪಾಧ್ಯಕ್ಷರು : ನಂಜುಂಡಸ್ವಾಮಿಯವರೇ ತಮಗೆ ಅವಕಾಶ ಇಲ್ಲ.

ಪ್ರೊ ಎಂ.ಡಿ. ನಂಜುಂಡಸ್ವಾಮಿ : ಇದು ಬಹಳ ಮುಖ್ಯವಾದ ವಿಚಾರ. ಆದಕಾರಣ ಮಂತ್ರಿಗಳ ಅವಕಾಶವನ್ನು ತೆಗೆದುಕೊಂಡಿದ್ದೇನೆ. ಸಭಾಧ್ಯಕ್ಷಣಿಯವರು ಅವಕಾಶ ಕೊಡಬೇಕು. ಏತಕ್ಕೆಂದರೆ, ಈಗಿರುವಂತಹ ಚೌಕಟ್ಟಿನಲ್ಲಿ ಇದನ್ನು ತಾವು ಮಾಡಬೇಡಿ ಎಂದು ನಾನು ಹೇಳಿಲ್ಲ. ಅವರಿಗೆ ಕೊಳ್ಳುವ ಶಕ್ತಿ ಕೊಡಿ ಎಂದು ಹೇಳುತ್ತೇನೆ. ಪ್ರೊಸೆಸಿಂಗ್ ಸೆಂಟರ್ಸ್ ಮಾಡಿ ಎಂದು ಹೇಳುತ್ತೇನೆ. ಅದು ಆಗುವವರೆಗೆ ನಡುವೆ ಇನ್ನೊಂದು ಯೋಜನೆ ಮಾಡಬಹುದು. ಮೋಸ ಆಗುವುದನ್ನು ತಡೆಯುವುದಕ್ಕೆ ಇದನ್ನು ಮಾಡಬಹುದು. 1991ರ ಫೆಬ್ರವರಿ ತಿಂಗಳಲ್ಲಿ ಒಂದು ಕ್ವಿಂಟಾಲ್ಗೆ 2700 ರೂಪಾಯಿ ಆಗಿದೆ ಎಂದು ತಾವು ಹೇಳಿದ್ದೀರಿ. ಇದು ಒಂದು ಅಂಗಡಿಯಲ್ಲಿ ಆಗಿರಬಹುದು. ಆದರೆ ಅದೇ ದಿವಸ ತಿಪಟೂರು ಮಾರ್ಕೆಟ್‌ನಲ್ಲಿ 700ರೂಪಾಯಿಗಳಿಗೆ ಖರೀದಿ ಆಗಿರುವುದು ನಮ್ಮ ಗಮನಕ್ಕೆ ಬಂದಿದೆ. ತಾವು ಅರಣ್ಯ ಇಲಾಖೆಯಲ್ಲಿ ಒಂದು ವ್ಯವಸ್ಥೆ ಮಾಡಿರುತ್ತೀರಿ. ನಾಟಾ ಮರದ ಹರಾಜು ಹಾಕುವಾಗ ಇಂತಹ ಬೆಲೆಗಿಂತ ಕಡಿಮೆ ಹರಾಜು ಕೂಗಬಾರದು ಎಂದು ಕಾನೂನು ಮಾಡಿದ್ದೀರಿ. ಅಂತಹ ಒಂದು ಕಾನೂನನ್ನು ರೈತ ಬೆಳೆದ ಎಲ್ಲ ವಸ್ತುಗಳಿಗೆ ಮಾಡಿದರೆ ಬೆಲೆ ರಕ್ಷಣೆ ಕೊಟ್ಟಹಾಗೆ ಆಗುತ್ತದೆ. ಅದನ್ನು ದಯವಿಟ್ಟು ಆಲೋಚನೆ ಮಾಡಿ.

ಶ್ರೀ ಕೆ.ಹೆಚ್. ಪಾಟೀಲ್ : ತಮ್ಮ ಸಲಹೆ ಯೋಗ್ಯವಾಗಿದೆ. ನಮ್ಮ ವ್ಯವಸಾಯ ಸಚಿವರ ಗಮನಕ್ಕೆ ಇದನ್ನು ತರುತ್ತೇನೆ. ಅವರು ಆ ಒಂದು ಕಾನೂನನ್ನು ತಂದರೆ ಅದಕ್ಕೆ ಸಂಪೂರ್ಣವಾಗಿ ನಾನು ಬೆಂಬಲ ಕೊಡುತ್ತೇನೆ. ಅದು ಆಗುವುದಕ್ಕಿಂತ ಮೊದಲು ನಾವು ಏನು ಮಾಡಬೇಕು ಕೈಕಟ್ಟಿಕೊಂಡು ಕೂಡಬೇಕೆ ಮಾರ್ಕೆಟ್‌ನಲ್ಲಿ ಆಗತಕ್ಕ ಅವ್ಯವಹಾರಗಳನ್ನು, ರೈತರ ಮೇಲೆ ಆಗತಕ್ಕ ದಬ್ಬಾಳಿಕೆಯನ್ನು ತಡೆಯಬೇಕೆ ಎನ್ನತಕ್ಕ ಪ್ರಶ್ನೆ ಬರುತ್ತದೆ. ಮಾನ್ಯ ಶಿವರಾಮೇಗೌಡರು ಪ್ರಶ್ನೆ ಕೇಳುವಾಗ ಹೇಳಿದರು, ನನಗಿಂತ ಹೆಚ್ಚು ಮಾಹಿತಿ ಅವರಿಗೆ ಗೊತ್ತಿದೆ. ಯಾರು ಕಳ್ಳರಿದ್ದಾರೆ ಎಂದು ನನಗೆ ಗೊತ್ತಿಲ್ಲ ಕಳ್ಳರು ಯಾರಿದ್ದಾರೆ ಎನ್ನುವುದನ್ನೆಲ್ಲಾ ಅವರು ಹೇಳಿಬಿಟ್ಟರು, ಆ ಮಾಹಿತಿಯನ್ನು ನನಗೆ ಕಳುಹಿಸಿಬಿಟ್ಟರೆ, ಅಂತಹ ಕಳ್ಳರನ್ನು ಮಾರ್ಕೆಟ್‌ನಿಂದ ಹೊರಕ್ಕೆ

ಹಾಕುವುದಕ್ಕೆ ನನಗೆ ಅನುಕೂಲವಾಗುತ್ತದೆ. ನಮ್ಮವರೇ ಕಳ್ಳರಿದ್ದು ನಾವು ಮುಚ್ಚಿಕೊಂಡರೆ ನಾವು ಕಲ್‌ಪ್ರಿಟ್ಸ್ ಆಗುತ್ತೇವೆ. ಅದು ಆಗುವುದು ಬೇಡ ಅದು ಗೊತ್ತಾದರೆ ಅಂತಹವರಿಗೆ ಲೈಸೆನ್ಸ್ ಕೊಡಬೇಡಿ ಎಂದು ಹೇಳಬಹುದು. ಅಧಿಕಾರಸ್ಥರು ಆ ರೀತಿ ಮಾಡಿದ್ದರೆ ಅವರನ್ನು ಮನೆಗೆ ಕಳುಹಿಸಬಹುದು. ಏನೂ ಮಾಡದೇ ಸುಮ್ಮನೆ ಇಟ್ಟುಕೊಂಡರೆ ನಾನೂ ತಪ್ಪುಗಾರನಾಗುತ್ತೇನೆ, ನೀವೂ ತಪ್ಪುಗಾರರಾಗುತ್ತೀರಿ. ಅದಕ್ಕೋಸ್ಕರ ತಮ್ಮಲ್ಲಿ ಏನು ಮಾಹಿತಿ ಇದೆ ಅದನ್ನು ಕಳುಹಿಸಿರಿ, ನಾವೂ ನೀವೂ ಕೂಡಿ ಅವರನ್ನು ಮಟ್ಟ ಹಾಕುವುದಕ್ಕೆ ಪ್ರಯತ್ನ ಮಾಡೋಣ. ನಾವು ಇರುವುದು ರೈತರ ಕಲ್ಯಾಣ ಮಾಡುವುದರ ಸಲುವಾಗಿ. ಆ ದೃಷ್ಟಿಯಲ್ಲಿ ನಾನು ಎಳ್ಳಷ್ಟೂ ಯಾರಿಗೂ ಕಡಿಮೆಯಾಗಲಾರದಷ್ಟು ರೈತರ ಹಿತದ ಸಲುವಾಗಿ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಮಂತ್ರಿಗಳಿಂದ ಒಂದು ಸ್ಪಷ್ಟೀಕರಣ ಬೇಕು.

ಉಪಾಧ್ಯಕ್ಷರು : ಇಲ್ಲ, ಈಗ ವಾಟಾಳ್ ನಾಗರಾಜ್‌ರವರು ಗಮನ ಸೆಳೆಯಬೇಕು.

ಶ್ರೀ ವಾಟಾಳ್ ನಾಗರಾಜ್ : ಅವರದ್ದು ಆದಮೇಲೆ ನಾನು ಕೇಳುತ್ತೇನೆ.

ಉಪಾಧ್ಯಕ್ಷರು : ಈಗ ಶ್ರೀ ಚಂದ್ರೇಗೌಡರು ಅರಣ್ಯ ಮಂತ್ರಿಗಳ ಗಮನ ಸೆಳೆಯಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ : ಯಾರು ಖದೀಮರು ಇದ್ದಾರೆ, ಕಳ್ಳರಿದ್ದಾರೆ, ಅವರ ಪಟ್ಟಿ ಕೊಡುತ್ತೇನೆ. ಅಲ್ಲಿ ಅಧಿಕಾರಿಗಳು ಭ್ರಷ್ಟರಿದ್ದಾರೆ. ಅಲ್ಲಿ ಏನು ಅವ್ಯವಹಾರ ನಡೆಯುತ್ತಿದೆ ಅದನ್ನು ತಡೆಗಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

---

(2) ಚಾಮರಾಜನಗರ-ಕೊಳ್ಳೇಗಾಲ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಗ್ರಾನೈಟ್ ಕಲ್ಲು ತೆಗೆಯುವುದರಿಂದ ನಿಸರ್ಗ ಸಂಪತ್ತು ನಾಶವಾಗುವುದರ ಜೊತೆಗೆ ವನ್ಯ ಮೃಗಗಳಿಗೆ ಪ್ರಾಣ ಭೀತಿ ಉಂಟಾಗುವುದು ಹಾಗೂ ಗಂಧದ ಕಳ್ಳ ಸಾಗಣೆದಾರ ವೀರಪ್ಪನನ್ನು ಹಿಡಿಯುವ ಕಾರ್ಯ ವಿಫಲವಾಗಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಚಾಮರಾಜನಗರ-ಕೊಳ್ಳೇಗಾಲ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಗ್ರಾನೈಟ್ ಕಲ್ಲುಗಳನ್ನು ತೆಗೆಯುವುದರಿಂದ ನಿಸರ್ಗ ಸಂಪತ್ತು ನಾಶವಾಗುವುದರ ಜೊತೆಗೆ ವನ್ಯ ಮೃಗಗಳಿಗೆ ಪ್ರಾಣಭೀತಿ ಉಂಟಾಗಿರುವುದು ಹಾಗೂ ಗಂಧದ ಕಳ್ಳ ಸಾಗಣೆದಾರ ಶ್ರೀ ವೀರಪ್ಪನನ್ನು ಹಿಡಿಯುವ ಕಾರ್ಯವು ವಿಫಲವಾಗಿರುವ ಬಗ್ಗೆ ಮಾನ್ಯ ಅರಣ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

+ ಶ್ರೀ ಇ.ಟಿ. ಶಂಬುನಾಥ್ : (ಅರಣ್ಯ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ. ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಮೈಸೂರು ಜಿಲ್ಲೆಯ ಕೊಳ್ಳೇಗಾಲ ಹಾಗೂ ಚಾಮರಾಜನಗರ ಅರಣ್ಯ ಪ್ರದೇಶದಲ್ಲಿ ಕಲ್ಲು ಗಣಿ ಗುತ್ತಿಗೆಯನ್ನು ವೃತ್ತ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು ಇವರು ಕರ್ನಾಟಕ ಮೈನರ್ ಮಿನರಲ್ ಕನ್ಸೆಷನ್ ನಿಯಮ 1969ರ ಪ್ರಕಾರ 41 ಸಂಸ್ಥೆಗಳಿಗೆ 1975ನೇ ಸಾಲಿನಿಂದ ಕೊಡುತ್ತಾ ಬಂದಿದ್ದರು.

ಏತನ್ಮಧ್ಯೆ 1979ರಲ್ಲಿ ಕರ್ನಾಟಕ ಮೈನರ್ ಮಿನರಲ್ ಕನ್ಸೆಶನ್ ನಿಯಮ 1969ನ್ನು ತಿದ್ದುಪಡಿಸಿ ಹೊಸದಾಗಿ ನಿಯಮವನ್ನು ಮಾಡಿ ಖಾಸಗಿ ಕಲ್ಲು ಗಣಿ ಗುತ್ತಿಗೆಯನ್ನು ಸಂಪೂರ್ಣವಾಗಿ ನಿಲ್ಲಿಸುವ ನಿಯಮವನ್ನು ಜಾರಿಗೆ ತರಲಾಯಿತು. ಅಲ್ಲದೆ ದಿನಾಂಕ 25-10-1980 ರಲ್ಲಿ ಭಾರತ ಅರಣ್ಯ ಸಂರಕ್ಷಣಾ ಕಾಯಿದೆ ಜಾರಿಗೆ